<u>**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.**</u>

<u>**ರಟ್ಟೀಹಳ್ಳಿ.**</u>

<u>**ಸಿ.ಸಿ.ನಂಬರ್ಃ 358/2023**</u>

ಸಿಡಬ್ಲ್ಯೂಃ 1

ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಬಸವರಾಜ ದಿಬ್ಬದಹಳ್ಳಿ |
| ತಂದೆಯ ಹೆಸರು | : | ಮಲ್ಲೇಶಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಿರೇಮೊರಬ |

ಇಂದು ದಿನಾಂಕಃ 25.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

1. ಚಾಸಾ–4 ನನ್ನ ಚಿಕ್ಕಪ್ಪ. ಆರೋಪಿ ನನಗೆ ಪರಿಚಯ. ರಿ.ಸ. ನಂಬರಃ 105/2, 1 ಎಕರೆ 28 ಗುಂಟೆ ನನ್ನ ಅಜ್ಜನಿಂದ ನನ್ನ ತಂದೆಗೆ ಮೃತ್ಯು ಪತ್ರದ ಮೂಲಕ ಬಂದಿರುವ ಆಸ್ತಿ. ಸುಮಾರು 4 ವರ್ಷಗಳ ಹಿಂದೆ ಬೆಳಿಗ್ಗೆ 11 ಗಂಟೆಗೆ ನಾನು, ಚಾಸಾ–4 ರವರು ಹೊಲಕ್ಕೆ ಹೋಗಿ ನನ್ನ ಚಿಕ್ಕಪ್ಪ ಹೊಲ ಉಳುಮೆ ಮಾಡುತ್ತಿದ್ದು ನಾನು ಗೊಬ್ಬರ ಒಗೆಯುವಾಗ ಆರೋಪಿಯು ಏಕಾಏಕಿ ಬಂದು, ಜಗಳ ತೆಗೆದು ಬೈದು ನನ್ನ ಚಿಕ್ಕಪ್ಪನಿಗೆ ಕೈಯಿಂದ ಮುಖಕ್ಕೆ ಹೊಡೆದು ದೂಡಾಡಿ, ಅಂಗಿ ಹರೆದು, ನಾನು ಜಗಳ ಬಿಡಿಸಲು ಹೋದಾಗ ನನ್ನನ್ನು ದೂಡಿ, ನೀನು ಸಂಬಂಧ ಇಲ್ಲ ಎಂದು ಹೆಂಡಿ ತೆಗೆದುಕೊಂಡು ನನ್ನ ಮುಖಕ್ಕೆ ಹೊಡೆದರು. ನಂತರ ನನ್ನನ್ನು ದೂಡಾಡಿ ಒದ್ದಿರುತ್ತಾರೆ.

2. ಯಾವ ನ್ಯಾಯಾಲಯ ಸಂಬಂಧ ಇಲ್ಲ, ಈ ಹೊಲಕ್ಕೆ ಬಂದರೆ ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ. ನನ್ನ ಚಿಕ್ಕಪ್ಪ ಆಸ್ಪತ್ರೆಗೆ ಹೋದರು, ನಾನು ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ–1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ. ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರ.ವ.ವ.ಯನ್ನು ನಿಪಿ–2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

3. ನಂತರ ಪೊಲಿಸರು ಮಾರನೆ ದಿನ ಘಟನಾ ಸ್ಥಳಕ್ಕೆ ಬಂದು, ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿರುತ್ತಾರೆ. ಮಣ್ಣಿನ ಹೆಂಡಿಯನ್ನು ಜಪ್ತು ಮಾಡಿಕೊಂಡಿರುತ್ತಾರೆ. ಸಾಕ್ಷಿಯು ಘಟನಾ ಜಾಗದ ಪಂಚನಾಮೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಪಿ-4 ಎಂದು ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ಸಲ್ಲಿಸಿದ ದೃಢಿಕರಣ ಪತ್ರವನ್ನು ನಿಪಿ-5 ಎಂದು ಹಾಗೂ ಸಿಡಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಿ.ಆರ್.ಪಿ.ಸಿ. ಕಲಂ 242 ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.